ಹಿಂದು ಮುಂದಿನಿಂದ ಇದ್ದರೂ ಕೆಲವೊಮ್ಮೆ ಅಪಾಯದ ವಾಸನೆ ಹೊಡೆಯಿತೆಂದರೆ ದಮ್ಮು ಕಟ್ಟಿ ಸಿಕ್ಕ ಸಿಕ್ಕ ಒಳದಾರಿಗಳಲ್ಲಿ ಲಾರಿ ನುಗ್ಗಿಸಿ ತಪ್ಪಿಸಿಕೊಳ್ಳಬೇಕು. ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲವೆಂದಾದಾಗ ಲಾರಿಯಿಂದ ಧುಮುಕಿ ಓಡಬೇಕು. ಮೂಸಾ ಅಪಾಯದ ಸಂದರ್ಭದಲ್ಲಿ ಮೈಮೇಲೆ ನುಗ್ಗಿಸಿಬಿಡುವಂತೆ ಲಾರಿ ಓಡಿಸುವುದರಿಂದ ಅವನ ಬೆನ್ನಟ್ಟಲು ಪೊಲೀಸರು ಕೆಲವೊಮ್ಮೆ ಅನುಮಾನಿಸುತ್ತಾರೆ. ವೈರಿಗಳನ್ನು ಹೆದರಿಸಲು, ಬೇರೆ ವಾಹನದವರು ಓವರ್‌ಟೇಕ್ ಮಾಡಲು ಸೈಡ್ ಕೊಡದಿದ್ದಾಗಲೆಲ್ಲ ಹಾಗೇ ಮಾಡಬೇಕೆಂದು ಸುರೇಶನಿಗೂ ಉಪದೇಶ ಮಾಡುತ್ತಿದ್ದ. ವಾರಕ್ಕೊಮ್ಮೆ ಕಾಸರಗೋಡಿನ ತಿಮ್ಮಪ್ಪಗಟ್ಟೆಯ ಕೋಳಿ ಟೆಂಪೋದಲ್ಲಿ ಹಾಸನಕ್ಕೆ ಹೋಗಿ ಕೋಳಿ ಲೋಡ್ ತರುವ ಅವನಿಗೆ ತಪ್ಪಿಸಿಕೊಳ್ಳುವ ವಿದ್ಯೆ ಕರಗತ. ಅಂತರರಾಜ್ಯ ತೆರಿಗೆ ತಪ್ಪಿಸಿ ಬರುವಾಗ ಶ್ರೀರಕ್ಷೆ ಸಿಗಲು ನಡುವೆ ಸಿಗುವ ಸ್ಟೇಷನ್ನಿಗೆ ಮಾಮೂಲು ಇಪ್ಪತ್ತು ಸಾವಿರ ಇಡಬೇಕು. ಆದರೂ ಕೆಲವೊಮ್ಮೆ ಯಾವ ದೇವರಿಗಾದರೂ ಸೇವೆ ಸಮಾಧಾನವಾಗದೆಯೊ, ಕಾನೂನು ದೇವರೆನ್ನುವ ಮೇಲಧಿಕಾರಿಯೊಬ್ಬನ ಕೆಟ್ಟ ದೃಷ್ಟಿ ಬಿದ್ದಿತೆಂದರೆ ಅಪಾಯ ಬೆನ್ನಟ್ಟಿತೆಂದೇ ಲೆಕ್ಕ. ಅಂತ ಸಂದರ್ಭಗಳಲ್ಲಿ ತಾನು ಮಾಡಿದ ಸಾಹಸಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಮೂಸಾ. ಇಂತಹ ಮಾತುಗಳ ನಡುವೆಯೇ ಒಮ್ಮೆ ಸುರೇಶ, ನಂಬಿಗಸ್ಥ ಡ್ರೈವರ್ ಸಿಕ್ಕಿದರೆ ರಿಕ್ಷಾವೊಂದನ್ನು ಬಾಡಿಗೆಗೆ ಇಡಬೇಕೆಂದಿರುವ ತನ್ನ ಯೋಜನೆಯನ್ನು ಹೇಳಿಕೊಂಡಿದ್ದ. 'ಅದಕ್ಕೆಂತದಕ್ಕೆ ಮಂಡೆಬಿಸಿ ಸುರೇಶಣ್ಣ. ನೀವು ರಿಕ್ಷಾ ತೆಗೆಯುವುದಾದ್ರೆ ನಾನೇ ಬರ್ತೇನೆ. ಹೊಯ್ಗೆ ಲಾರಿ, ಕೋಳಿ ಟೆಂಪೋ ಅಲ್ಲದೆ ನಂಗೂ ನೇರ್ಪಕೆ ಒಂದು ಕೆಲಸ ಇಲ್ಲ' ಅಂದಿದ್ದ. ಆತ ಹಾಗಂದಿದ್ದೇ ಸುರೇಶ ಬ್ಯಾಂಕಿನಿಂದ ಸಾಲ ತೆಗೆದು ರಿಕ್ಷಾ ಖರೀದಿಸಿ ಅದಕ್ಕೆ 'ರಾಜ'ನೆಂಬ ಹೆಸರು ಬರೆಸಿ ಮೂಸಾನ ಕೈಗೆ ಕೊಟ್ಟಿದ್ದ. ವಾರದಲ್ಲಿ ಐದು ದಿನ 'ರಾಜ' ದುಡಿಯುತ್ತಿದ್ದ. ಮೂಸಾ ಹಣದ ಲೆಕ್ಕಾಚಾರದಲ್ಲಿ ಕಟ್ಟುನಿಟ್ಟು. ಮೊದಲ ದಿನದಿಂದಲೇ ರಾತ್ರಿ ಹತ್ತು ಗಂಟೆಯೊಳಗೆ ರಾಜನನ್ನು ಸುರೇಶನ ಮನೆಗೆ ತಂದು ನಿಲ್ಲಿಸಿ, ಕಿಸೆಯಲ್ಲಿ ಸಂಗ್ರಹವಾಗಿದ್ದ ದುಡ್ಡನ್ನೆಲ್ಲ ಸುರೇಶನ ಕೈಯಲ್ಲಿಟ್ಟು; ತನ್ನ ಸಂಬಳವನ್ನೂ ಅಂದಂದೇ ಪಡೆಯುತ್ತಿದ್ದ. ಅಕಸ್ಮಾತ್ ಸುರೇಶ ಸಂಬಳ ಕೊಡಲು ಒಂದು ದಿನ ತಡ ಮಾಡಿದರೆ ಬಡ್ಡಿ ಸೇರಿಸಿಯೇ ಕೇಳುತ್ತಿದ್ದ. ಮೊದಲ ಸಂಬಳ ಸುರೇಶ ಎರಡು ದಿನ ತಡವಾಗಿ ಕೊಟ್ಟಾಗ ಮೂಸಾ, 'ಇದು ಅನ್ಯಾಯ ಸುರೇಶಣ್ಣ. ನೀವು ಎರಡು ದಿನ ಸಂಬಳ ಕೊಡದಿದ್ದದೆಂತದಕ್ಕೆ? ಮೊನ್ನೆ ಮಾಲಿಂಗ ಮಣಿಯಾಣಿಗೆ ಐದು ಸಾವಿರ ಸಾಲ ಕೊಟ್ಟದ್ದು ಬ್ಲೇಡ್ ಬಡ್ಡಿಗೇ ಅಲ್ವಾ. ನಿಮ್ಗೆ ಅವ ದಿನಕ್ಕೆ ಹತ್ತು ಪರ್ಸಂಟ್ ಬಡ್ಡಿ ಕೊಡ್ತಾನೆ. ನನ್ನ ಸಂಬಳ ಒಂದು ದಿನ ಇಟ್ಟುಕೊಂಡದ್ದಕ್ಕೆ ನಂಗೆ ಬಡ್ಡಿ ಕೊಡ್ಬೇಡ್ವಾ?' ಅನ್ನುತ್ತ ಕೈ ಚಾಚಿದ್ದ. ಹೊಯ್ಗೆಲಾರಿಯಲ್ಲಿ ಸಿಕ್ಕಿದ ಕಾಸನ್ನೆಲ್ಲ ಸುರೇಶ ಅರ್ಜೆಂಟಾಗಿ ಒಂದೆರಡು ಸಾವಿರ ಸಾಲ ಬೇಕಾದವರಿಗೆ ದಿನದ ಬಡ್ಡಿಗೆ ಕೊಡುತ್ತಿದ್ದ. ಅವನ ಹತ್ತಿರ ಬಡ್ಡಿಗೆ ಸಾಲ ಪಡೆದುಕೊಳ್ಳುತ್ತಿದ್ದುದು ಹೆಚ್ಚಾಗಿ ದಿನಗೂಲಿಗೆ ಹೋಗುವವರು ಹಾಗೂ ಕಟ್ಟಡ ನಿರ್ಮಾಣದ ಕೆಲಸಕ್ಕೆ ಹೋಗುವವರು. ರಾಜನ ದುಡಿಮೆಯಿಂದ ಉತ್ಪಾದನೆಯೂ ಹೆಚ್ಚಾಗಿತ್ತು. ಮೂಸಾ ಕೋಳಿ ಟೆಂಪೋದಲ್ಲಿ ಹೋಗುವ ದಿನ ಅನಿವಾರ್ಯವಾಗಿ ರಾಜನಿಗೆ ವಿಶ್ರಾಂತಿ. ವರ್ಷ ಉರುಳುವ ವರೆಗೂ ಅಂದರೆ ಮೂಸಾನಿಗೆ ರಿಕ್ಷಾ ಸ್ಟ್ಯಾಂಡ್ ಸಮೀಪದ ಪಾನ್ ಅಂಗಡಿಯ ಗುಟ್ಕಾಜಿತುವಿನ ಸ್ನೇಹವಾಗುವವರೆಗೂ ನಡೆದಿದ್ದು ಹೀಗೆಯೇ. ಗುಟ್ಕಾಜಿತುವಿನಿಂದಾಗಿ ರಾತ್ರಿಯ ಬಾಡಿಗೆ ಜಾಸ್ತಿ ಸಿಗಲಾರಂಭಿಸಿದಾಗ; ಮೂಸಾ ರಾಜನನ್ನು ಹೆಚ್ಚಿನ ದಿನಗಳಲ್ಲೂ ತನ್ನ ಮನೆಯಲ್ಲೆ ಇಟ್ಟುಕೊಳ್ಳಲಾರಂಭಿಸಿದ್ದ. ಇದನ್ನ ಪ್ರಶ್ನೆ